14. Units manufacturing additives, preservatives, colours and fragrant for the Processed Food Industry;

15. Bio-technology and Bio-informatics industries.

16. Commodity grading and packaging industry;

17. Processing of plantation crops including tea and coffee, forest produce such as herbal, medicinal and aromatic plants, coconut based products and Arecanut/ Arecanut based products.

18. Sugar Industry (excluding Molasses/Alcohol).

Note: Any ambiguity/difference of opinion in interpretation of the above definition will be decided upon by the FPMC as detailed in Para No.6 of Policy Implementation & Monitoring.

ರಾಜ್ಯದಲ್ಲಿ ಆಹಾರ ಸಂಸ್ಕರಣಾ ಘಟಕಗಳ ಸ್ಥಾಪನೆಯ ಬಗ್ಗೆ

4257 (4886) : ಶ್ರೀ ಪಾಟೀಲ್ ಶಿವಾನಂಪ ಸಿದ್ಧರಾಮಗೌಡ (ತ್ರಿಕೋಟ) ಮಾನ್ಯ ಕೃಷಿ ಉತ್ಪನ್ನ ಸಂಸ್ಕರಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಆಹಾರ ಸಂಸ್ಕರಣ ಘಟಕಗಳನ್ನು ಸ್ಥಾಪಿಸಲಾಗಿದೆಯೇ;

ಆ) ರಾಜ್ಯದಲ್ಲಿ ಯಾವ ಜಿಲ್ಲೆಗಳಲ್ಲಿ ಆಹಾರ ಸಂಸ್ಕರಣ ಘಟಕಗಳನ್ನು ಸ್ಥಾಪಿಸಲಾಗಿದೆ;

ಇ) ಆಹಾರ ಸಂಸ್ಕರಣ ಘಟಕಗಳನ್ನು ಸ್ಥಾಪಿಸದೇ ಇದ್ದಲ್ಲಿ ಸರ್ಕಾರ ಇಂತಹ ಘಟಕಗಳನ್ನು ಸ್ಥಾಪಿಸುವ ಉದ್ದೇಶವನ್ನು ಹೊಂದಿದೆಯೇ;

ಈ) ಹಾಗಿದ್ದರೇ ರಾಜ್ಯದ ಯಾವ ಜಿಲ್ಲೆಗಳಲ್ಲಿ ಘಟಕಗಳನ್ನು ಸ್ಥಾಪಿಸಲಾಗುವುದು ?

ಉ) ಸ್ಥಾಪನೆಗಾಗಿ ನಿಗದಿಪಡಿಸಿದ ನಿರ್ದಿಷ್ಟ ಕಾಲಮಿತಿ ಏನು ?

ಶ್ರೀ ಜೆ.ರಾಜುಗೌಡ (ಕೃಷಿ ಉತ್ಪನ್ನ ಸಂಸ್ಕರಣ ರಾಜ್ಯ ಸಚಿವರು):

ಅ) ಇಲ್ಲ.

ಆ) ರಾಜ್ಯದಲ್ಲಿ ಬೆಳಗಾಂ, ಮಂಡ್ಯ, ಗುಲ್ಬರ್ಗಾ, ಕೋಲಾರ, ಬಾಗಲಕೋಟೆ ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲಿ ಆಹಾರ ಸಂಸ್ಕರಣಾ ಘಟಕಗಳು ಸ್ಥಾಪಿಸಲಾಗುವುದು.

ಇ) ಮೇಲೆ ತಿಳಿಸಿರುವಂತೆ 6 ಆಹಾರ ಸಂಸ್ಕರಣಾ ಘಟಕಗಳನ್ನು ಸ್ಥಾಪಿಸುವ ಸಲುವಾಗಿ ಫುಡ್ ಕರ್ನಾಟಕ ಸಂಸ್ಥೆಯನ್ನು ಸ್ಥಾಪಿಸಲಾಗಿದೆ.

ಈ) ಮೇಲೆ (ಅ) ದಲ್ಲಿರುವಂತೆ.

ಉ) 3 ರಿಂದ 5 ವರ್ಷಗಳು.

ಭದ್ರಾ ಸಹಕಾರಿ ಸಕ್ಕರೆ ಕಾರ್ಖಾನೆ ಬೈಲಾ ಬದಲಾವಣೆ ಕುರಿತು

4258 (4938) : ಶ್ರೀ ರವೀಂದ್ರನಾಥ್.ಎಸ್.ಎ. (ಮಾಯಕೊಂಡ) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಭದ್ರಾ ಸಹಕಾರಿ ಸಕ್ಕರೆ ಕಾರ್ಖಾನೆ ನಿಯಮಿತ. ದೊಡ್ಡಬಾತಿ ಇದರ ಕಬ್ಬು ನುರಿಸುವ ಸಾಮರ್ಥ್ಯವನ್ನು ಹಾಲಿ 1250 ಟಿಸಿಡಿ 1800 ಟಿಸಿಡಿಗೆ ಹೆಚ್ಚಿಸುತ್ತಿರುವುದರಿಂದ ಕಾರ್ಖಾನೆಯ ಬೈಲಾ ಸಂಖ್ಯೆ. 4(vii)(ಸಿ)ಗೆ ಸೂಕ್ತ ತಿದ್ದುಪಡಿ ತಂದು ಅರ್ಹತೆ ಇರುವವರನ್ನು

'ಎ' ತರಗತಿ ಸದಸ್ಯರನ್ನಾಗಿ ಮಾಡಿಕೊಳ್ಳಲು ಕ್ರಮವಿಡತಕ್ಕದ್ದೆಂದು ಕಬ್ಬು ಅಭಿವೃದ್ಧಿ ಆಯುಕ್ತರು ಸದರಿ ಕಾರ್ಖಾನೆಯವರು ಜೂನ್ 1999ರಲ್ಲಿ ಆದೇಶಿಸಿರುವುದು ನಿಜವೇ; ಸದರಿ ಆದೇಶದ ಪ್ರತಿ ಒದಗಿಸುವುದು

ಆ) ಸದರಿ ಆದೇಶವನ್ನು ಕಾರ್ಖಾನೆಯವರು ಪಾಲಿಸಿರುತ್ತಾರೆಯೇ; ವಿವರಿಸುವುದು;

ಇ) ಪಾಲಿಸಿರದೇ ಇದ್ದಲ್ಲಿ, ಸರ್ಕಾರ ಸದರಿ ಕಾರ್ಖಾನೆಯ ಮೇಲೆ ತೆಗೆದುಕೊಂಡಿರುವ ಮತ್ತು ತೆಗೆದುಕೊಳ್ಳುವ ಕ್ರಮಗಳೇನು ?

ಶ್ರೀ ಹೆಚ್.ವಿಶ್ವನಾಥ್ (ಸಹಕಾರ ಸಚಿವರು):

ಅ) ಅಂತಹ ಆದೇಶ ಮಾಡಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಸಹಕಾರಿ ಸಕ್ಕರೆ ಕಾರ್ಖಾನೆಗಳಿಗೆ N.C.D.C.ನೀಡುವ ಸಾಲದ ಬಗ್ಗೆ

4259 (4940) : ಶ್ರೀ ರವೀಂದ್ರನಾಥ್ ಎಸ್.ಎ.(ಮಾಯಕೊಂಡ) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಸಹಕಾರ ಸಕ್ಕರೆ ಕಾರ್ಖಾನೆಗಳಿಗೆ ರಾಷ್ಟ್ರೀಯ ಸಹಕಾರ ಅಭಿವೃದ್ಧಿ ನಿಗಮ(N.C.D.C.) ಮತ್ತು ಕೇಂದ್ರ ಸರ್ಕಾರದ ಸಕ್ಕರೆ ಅಭಿವೃದ್ಧಿ ನಿಧಿಯಿಂದ ಕೊಡುವ ಸಾಲಕ್ಕೆ ರಾಜ್ಯ ಸರ್ಕಾರದ ಗ್ಯಾರಂಟಿ ಕಡ್ಡಾಯವೇ;

ಆ) ಹೌದಾದಲ್ಲಿ, ಭದ್ರಾ ಸಹಕಾರಿ ಸಕ್ಕರೆ ಕಾರ್ಖಾನೆ ನಿಯಮಿತ, ದೊಡ್ಡಬಾತಿ ಇದಕ್ಕೆ ಇದುವರೆಗೆ (N.C.D.C.) ರವರು ಮತ್ತು ಸಕ್ಕರೆ ಅಭಿವೃದ್ಧಿ ನಿಧಿಯಿಂದ ಕೊಟ್ಟಿರುವ ಸಾಲವೆಷ್ಟು;

ಇ) ಇವುಗಳಿಗೆ ವಿಧಿಸುವ ಬಡ್ಡಿ ದರವೇನು;

ಈ) ಇದುವರೆಗೂ ಕಾರ್ಖಾನೆಯವರು ವಾಪಾಸ್ ಮಾಡಿರುವ ಸಾಲದ ಮೊತ್ತವೇನು; ಈ ಸಾಲಗಳಿಗೆ ಸರ್ಕಾರ ಕೊಟ್ಟಿರುವ ಗ್ಯಾರಂಟಿ ಪತ್ರಗಳ ದೃಢೀಕೃತ ಪ್ರತಿಗಳನ್ನು ಒದಗಿಸುವುದು.

ಶ್ರೀ ಹೆಚ್.ವಿಶ್ವನಾಥ್ (ಸಹಕಾರ ಸಚಿವರು):

ಅ) ಸಹಕಾರ ಸಕ್ಕರೆ ಕಾರ್ಖಾನೆಗಳಿಗೆ ಕೇಂದ್ರ ಸರ್ಕಾರದ ಸಕ್ಕರೆ ಅಭಿವೃದ್ಧಿ ನಿಧಿಯಿಂದ ಕಬ್ಬು ಅಭಿವೃದ್ಧಿಗೆ, ಆಧುನೀಕರಣ ಮತ್ತು ಸಾಮರ್ಥ್ಯ ವಿಸ್ತರಣೆ ಸಹ ವಿದ್ಯುತ್ ಮತ್ತು ಎಥನಾಲ್ ಉತ್ಪಾದನೆಗೆ ಕೊಡುವ ಸಾಲಕ್ಕೆ ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ ಮತ್ತು ಸಕ್ಕರೆ ಕಾರ್ಖಾನೆಗಳ ನಡುವೆ ತ್ರಿಪಕ್ಷೀಯ ಒಡಂಬಡಿ ಕೆಮಾಡಿಕೊಳ್ಳಬೇಕಾಗುತ್ತದೆ ಹಾಗೂ ಸರ್ಕಾರದ ಗ್ಯಾರಂಟಿ/ಬ್ಯಾಂಕ್ ಗ್ಯಾರಂಟಿ ನೀಡಬೇಕಾಗಿರುತ್ತದೆ.

ಎನ್‌ಸಿಡಿಸಿಯು ಸಕ್ಕರೆ ಕಾರ್ಖಾನೆಗಳಿಗೆ ನೇರವಾಗಿ ಸಾಲ ನೀಡುವಂತಹ ಸಂದರ್ಭದಲ್ಲಿ ಆಯಾ ಪ್ರಕರಣಗಳಿಗೆ ಅನುಗುಣವಾಗಿ ಸರ್ಕಾರದ ಗ್ಯಾರಂಟಿ ಅವಶ್ಯವೆನಿಸಿದಲ್ಲಿ, ಅಂತಹ ಪ್ರಕರಣಗಳನ್ನು ಪರಿಶೀಲಿಸಿ ಸರ್ಕಾರದ ಗ್ಯಾರಂಟಿ ನೀಡಲಾಗುತ್ತಿದೆ.